ವಿಷಯ : ರಾಜ್ಯದ ವಿದ್ಯುತ್ ಯೋಜನೆಗಳಿಗೆ ಅನಿವಾಸಿ ಭಾರತೀಯರಿಂದ ಬಂಡವಾಳ

Q : 220

ಶ್ರೀ ಗುರುಪಾದಪ್ಪ ನಾಗ್ಮಾರಪಲ್ಲಿ (ಔರಾದ್) : ಮಾನ್ಯ ಉಪಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದ ವಿದ್ಯುತ್ ಯೋಜನೆಗಳಿಗೆ ಅನಿವಾಸಿ ಭಾರತೀಯ ಹಾಗೂ ವಿದೇಶಿ ಸಂಸ್ಥೆಗಳಿಂದ ಬಂಡವಾಳ ಹೂಡಿಕೆಯನ್ನು ಕೋರಲಾಗಿತ್ತೆ?

ಆ) ಆ ಕೋರಿಕೆಯ ಮೇರೆಗೆ ಇದುವರೆಗೂ ಎಷ್ಟು ಜನ ಅನಿವಾಸಿ ಭಾರತೀಯರು ಹಾಗೂ ವಿದೇಶಿ ಸಂಸ್ಥೆಗಳು ಬಂಡವಾಳ ಹೂಡಲು ಮುಂದೆ ಬಂದಿವೆ?

ಶ್ರೀ ಎಸ್. ಎಂ. ಕೃಷ್ಣ (ಉಪಮುಖ್ಯಮಂತ್ರಿಗಳು) :

ಅ) ಸ್ಪಷ್ಟ ಎನ್. ಆರ್. ಐ. ವಿದೇಶಿ ಖಾಸಗಿ ಬಂಡವಾಳದಾರರಿಗೆ, ಯಾವುದೇ ನೇರ ಆಹ್ವಾನವನ್ನು ಕಳುಹಿಸಿಲ್ಲ. ಆದಾಗ್ಯೂ, ಖಾಸಗಿ ಬಂಡವಾಳ ಹೂಡಿಕೆಗಾಗಿ ಜಲ ಮತ್ತು ಶಾಖೋತ್ಪನ್ನ ವಿದ್ಯುತ್ ಯೋಜನೆಗಳ ಪಟ್ಟಿಯನ್ನು ಕೊಡಮಾಡುವ ಒಂದು ಕಿರುಹೊತ್ತಿಗೆಯನ್ನು ರಾಜ್ಯ ಸರ್ಕಾರವು ಪ್ರಕಟಿಸಿತ್ತು.

ಆ) ಪ್ರತಿಯೊಂದು ಒಡಂಬಡಿಕೆ ಪತ್ರದ ಅನುಷ್ಠಾನದ ಬಗ್ಗೆ ಒಂದು ಆದೇಶವನ್ನು ರಾಜ್ಯ ಸರ್ಕಾರವು ಸದ್ಯದಲ್ಲೇ ಹೊರಡಿಸುವುದು.

ವಿಷಯ : ಮಂಚನಬೆಲೆ ಜಲಾಶಯ ಯೋಜನೆಗೆ ಬಿಡುಗಡೆಯಾದ ಹಣ

Q : 1738

ಶ್ರೀ ಹೆಚ್. ಎಂ. ರೇವಣ್ಣ (ಮಾಗಡಿ) : ಮಾನ್ಯ ಉಪಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮಂಚನಬೆಲೆ ಜಲಾಶಯ ಯೋಜನೆಯ ಕೆಲಸಕ್ಕೆ ಇಲ್ಲಿಯವರೆಗೆ ಬಿಡುಗಡೆ ಮಾಡಿರುವ ಹಣವೆಷ್ಟು?

ಆ) ಈ ಜಲಾಶಯ ಪೂರ್ಣಗೊಳ್ಳಲು ಇನ್ನೂ ಎಷ್ಟು ಹಣ ಬೇಕಾಗುತ್ತದೆ ಹಾಗೂ ಯಾವಾಗ ಪೂರ್ಣಗೊಳಿಸಲಾಗುವುದು?

ಇ) ಮಂಚನಬೆಲೆ ಜಲಾಶಯ ಯೋಜನೆ ವ್ಯಾಪ್ತಿಯಲ್ಲಿ ಮುಳುಗಡೆಯಾಗಿರುವ ಜಮೀನು ಎಷ್ಟು? ಇದರಲ್ಲಿ ಮಾಗಡಿ ತಾಲ್ಲೂಕಿಗೆ ಸೇರಿದ ಎಷ್ಟು ಜನ ರೈತರ ಎಷ್ಟು ಜಮೀನು ಸೇರಿದೆ?

ಈ) ಹಾಗಿದ್ದಲ್ಲಿ, ರೈತರಿಗೆ ಎಷ್ಟು ಪರಿಹಾರ ನೀಡಲಾಗಿದೆ? ಇನ್ನೂ ಪರಿಹಾರ ನೀಡಬೇಕಾದ ಮೊತ್ತವೆಷ್ಟು? ಹಾಗೂ ಯಾವಾಗ ಪರಿಹಾರ ನೀಡಲಾಗುವುದು?

ಶ್ರೀ ಎಸ್. ಎಂ. ಕೃಷ್ಣ (ಉಪಮುಖ್ಯಮಂತ್ರಿಗಳು) :

ಅ) ಜನವರಿ 1993ರ ಅಂತ್ಯದವರೆಗೆ 23.92 ಕೋಟಿ ರೂ.ಗಳನ್ನು ವೆಚ್ಚ ಮಾಡಲಾಗಿದೆ.

ಆ) ಇಂದಿನ ದರಗಳ ಪ್ರಕಾರ ಈ ಯೋಜನೆಯನ್ನು ಪೂರ್ಣಗೊಳಿಸಲು ಬೇಕಾಗಿರುವ ಹಣ